# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128–2011** **ಡಿ . ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸೋಮೇಶ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05–07–2024.** |

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಜೇ.ಎಸ್ ವಕೀಲರಿಂದ:**

ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಹೆಸರು ಮರಪ್ಪ. ಶಿವಪ್ಪ, ನಿಂಗಪ್ಪ ಮತ್ತು ಸಣ್ಣಮ್ಮ ನನ್ನ ತಂದೆಯ ಸಹೋದರ–ಸಹೋದಯರಾಗಿರುತ್ತಾರೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ನನ್ನ ತಂದೆಯವರಾದ ಮರಪ್ಪನವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನ್ನ ತಂದೆ ಮರಪ್ಪನವರ ಹೆಸರಿನಲ್ಲಿ ಇರುವ ಆಸ್ತಿಗಳು ಅವರ ತಂದೆಯಿಂದ ಬಂದಂತಹ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ನನ್ನ ತಂದೆಯ, ತಂದೆ ಹೆಸರು ಮಾದಪ್ಪ ಉರುಫ್ ಅಪ್ಪಯ್ಯ ಎಂದರೆ ಸರಿ. ನಾನು ನನ್ನ ತಾತನವರನ್ನು ನೋಡಿರುವುದಿಲ್ಲ. ನನ್ನ ತಂದೆಯವರ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಹೊರತುಪಡಿಸಿ ನನ್ನ ತಾತನವರು ಹೆಸರಿನಲ್ಲಿ ಯಾವ–ಯಾವ ಆಸ್ತಿಗಳು ಇತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು 30 ವರ್ಷಗಳ ಹಿಂದೆಯೇ ವಿಭಾಗವಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಶಿವಪ್ಪ, ನಿಂಗಪ್ಪ ಮತ್ತು ಸಣ್ಣಮ್ಮನವರಿಗೆ ವಿಭಾಗದಲ್ಲಿ ಯಾವ ಆಸ್ತಿಗಳು ಬಂದಿತ್ತು ಎಂದು ತಿಳಿಸಲು ಯಾವುದಾದರೂ ಒಂದು ಸರ್ವೇ ನಂಬರ್ ಹೇಳಲು ನಿಮಗೆ ಸಾಧ್ಯವಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

2. ನನ್ನ ತಂದೆಯವರು ಮರಣಹೊಂದಿ ಸುಮಾರು 6 ವರ್ಷಗಳಾಗಿರುತ್ತವೆ. ನನ್ನ ತಂದೆಯವರ ಹೆಸರಿನಲ್ಲಿ ಇರುವ ಆಸ್ತಿಗಳನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಳ್ಳಲು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ.

3. ನಮ್ಮ ತಾತನವರ ಆಸ್ತಿಗಳು 30 ವರ್ಷಗಳ ಹಿಂದೆ ವಿಭಾಗವಾಯಿತು ಎಂದು ತಿಳಿದ ಸಾಕ್ಷಿದಾರರು ನಮ್ಮ ಊರಿನಲ್ಲಿ ಇರುತ್ತಾರೆ. 30 ವರ್ಷಗಳ ಹಿಂದೆ ನಮ್ಮ ಕುಟುಂಬದ ಸ್ವತ್ತುಗಳು ವಿಭಾಗವಾದ ಬಗ್ಗೆ ತಿಳಿದ ಸಾಕ್ಷಿದಾರರುಗಳು ಈಗ ಜೀವಂತ ಇರುವುದಿಲ್ಲ.

4. ನನ್ನ ತಂದೆಯವರ ಸಹೋದರ–ಸಹೋದರಿಯರ ಪೈಕಿ ನನ್ನ ತಂದೆಯವರೇ ಬುದ್ಧಿವಂತರಾದ ಕಾರಣ ಒಟ್ಟು ಕುಟುಂಬದ ನಿರ್ವಹಣೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾತನವರ ಮರಣಾ ನಂತರ ಕುಟುಂಬದ ವ್ಯವಹಾರಗಳನ್ನು ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದ ಕಾರಣ ಅವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಹೆಸರಿಗೆ ಖಾತೆ ಆಗಿರುವುದನ್ನು ಉಪಯೋಗಿಸಿಕೊಂಡು ವಾದಿಯರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಯಾವುಕೇ ಹಕ್ಕು ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾತನವರ ಆಸ್ತಿಗಳು ಭಾಗವಾಗಿರುವುದಿಲ್ಲ, ಸದರಿ ಆಸ್ತಿಗಳಲ್ಲಿ ವಾದಿಯರಿಗೂ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

5. 2006 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳ ಪೈಕಿ ಒಂದು ಸ್ವತ್ತನ್ನು ನಾವುಗಳು ಮಾರಾಟ ಮಾಡಿದ ಸಮಯ ವಾದಿಗಳು ಸದರಿ ಕ್ರಯವನ್ನು ಪ್ರಶ್ನಿಸಿ ತಮಗೂ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಭಾಗಾಂಶ ಇದೆ ಎಂದು ಕೇಳಿದಾಗ ನಾವುಗಳು

ವಾದಿಗಳಿಗೆ ಭಾಗಾಂಶವನ್ನು ನೀಡಲು ನಿರಾಕರಿಸಿದ್ದರಿಂದ ಈ ದಾವಾವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**